Reg. No. | | | | | | | | | |

**BCMKAL 104**

## ಗುಣಾಂಕ ಆಧಾರಿತ ಮೊದಲನೆಯ ಸೆಮಿಸ್ಟರ್ ಬಿ.ಕಾಂ. ಪದವಿ ಪರೀಕ್ಷೆ, ನವೆಂಬರ್/ಡಿಸೆಂಬರ್ 2018

## ಕನ್ನಡ ಭಾಷಾ ಪತ್ರಿಕೆ – 1

## (2017-18 Batch Onwards)

ಸಮಯ : 3 ಗಂಟೆಗಳು

ಗರಿಷ್ಠಾಂಕಗಳು : 80

I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ : **(3×8=24)**

1) ಭೀಮ ಹಾಗೂ ಹನುಮಂತರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿರಿ.

**ಅಥವಾ**

ಡಿ.ವಿ.ಜಿ.ಯವರು ಸಾರುವ ಜೀವನ ಸಿದ್ಧಾಂತಗಳೇನು ?

2) ಗಂಗವ್ವನನ್ನು ಗೌರವ್ವ ತಂಗಿ ಎಂದು ಒಪ್ಪಿಕೊಂಡ ಸನ್ನಿವೇಶವನ್ನು ವಿವರಿಸಿರಿ.

**ಅಥವಾ**

ಕುಂಞಮೋನು ಹುಲಿಯನ್ನು ಕೊಂದ ಪ್ರಸಂಗದ ಸ್ವಾರಸ್ಯವನ್ನು ವಿವರಿಸಿರಿ.

3) ಮೊಬೈಲ್ ಬ್ಯಾಂಕಿಂಗ್‌ನ ಸಾಧ್ಯತೆಗಳನ್ನು ಪರಿಚಯಿಸಿರಿ.

**ಅಥವಾ**

ಲೇಖನ ಚಿಹ್ನೆಗಳು ಎಂದರೇನು ? ವಿವಿಧ ರೀತಿಯ ಲೇಖನ ಚಿಹ್ನೆಗಳನ್ನು ಪರಿಚಯಿಸಿರಿ.

II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ : **(3×5=15)**

1) ಮಗುವಿನ ಚಿತ್ರಕಲ್ಪನೆ ಯಾವುದು ? ಅದು ತಾಯಿಯ ಮೇಲೆ ಮಾಡಿದ ಪರಿಣಾಮವೇನು ?

**ಅಥವಾ**

ಕಡಲು ತಾಯಿಯ ಮುಂದೆ ತುಳುವ ಮಕ್ಕಳ ಕೋರಿಕೆಯೇನು ?

2) ಬಡತನದ ದಾರುಣ ಚಿತ್ರವನ್ನು ಕುಂ. ವೀ. ಅವರ ಕತೆ ಹೇಗೆ ಚಿತ್ರಿಸಿದೆ ?

**ಅಥವಾ**

''ತತ್ವ ಅರಿತು ಮಾಡಿದಾಗಲೇ ನೈಸರ್ಗಿಕ ಕೃಷಿ'' – ಚಾಮೇಗೌಡರ ಈ ಹೇಳಿಕೆಯನ್ನು ವಿಶ್ಲೇಷಿಸಿರಿ.

ಪು.ತಿ.ನೋ.

3) ಭೀಮ್ ಆ್ಯಪ್‌ನ ವೈಶಿಷ್ಟ್ಯವೇನು ?

ಅಥವಾ

ಸಂಕ್ಷೇಪ ಲೇಖನ ಎಂದರೇನು ? ವಿವರಿಸಿರಿ.

III. ಕೆಳಗಿನವುಗಳಲ್ಲಿ ಒಂದು ಪದ್ಯದ ಭಾವಾರ್ಥ ಬರೆಯಿರಿ : (1×5=5)

1) ಹಿರಿಯ ಸೊಗಸಾಯ್ತೆ ನಗಪೂರ್ವದ
ಪರಿಮಳದ ಕೇಳಿಯಲಿ ನೀನಾ
ಸರಸಿಜವ ತಂದಿತ್ತು ತನ್ನ ಮನೋಗತ ವ್ಯಥೆಯ
ಪರಿಹರಿಪುದೆನಲಬಜವದನೆಯ
ಕುರುಳನುಗುರಲಿ ತಿದ್ದಿದನು ತ
ತ್ಸರಸಿಜವ ತಹೆನೆನುತ ಕೊಂಡನು
ನಿಜ ಗದಾಯುಧವ

2) ಕೊಲೆಗಡುಕವೆನಿಪ ಹುಲಿ ಸಲಹದೇಂ ಮರಿಗಳನು
ಒಲುಮೆ ಕರುಳಡಗಿಹುದು ಪಗೆತನದ ಪೊಡೆಯೊಳ್
ನಲುಮೆಯನು ಹೊರಹೊಮ್ಮಿಸುವುದು ವರನುನ್ನತಿಕೆ
ಒಲವಾತ್ಮ ವಿಸ್ತರಣೆ – ಮಂಕುತಿಮ್ಮ

IV. ಕೆಳಗಿನವುಗಳಲ್ಲಿ ಎರಡನ್ನು ಸಂದರ್ಭಸಹಿತ ವಿವರಿಸಿರಿ. (2×4=8)

1) ಗೌರವಿಸು ಜೀವನವ ಗೌರವಿಸು ಚೇತನವ.

2) ಹತ್ತೂರ ನೀರನ್ನು ಕುಡಿದೆನ್ನ ಜೀವವಿದು ಮಾಗಿ ಚೈತನ್ಯವನು ಮಿಡಿಯಬೇಕು.

3) ದೈತ್ಯನೊ ದಿವಿಜನೋ ಕಿನ್ನರನೊ ನೀನಾರು.

4) ಈರೆಗೇಪಲ ಕಯಿನ್ ಮುಗಿಪೊ
ಈರೆ ದಯೆನ್ ಮದಪಯೊ.

(ನಿನಗೆ ನಿತ್ಯವು ಕೈಯ ಮುಗಿವೆ ನಿನ್ನ ದಯೆಯ ಮರೆಯಲಾರೆ)

V ಅ) ಕೆಳಗಿನವುಗಳಲ್ಲಿ ಎರಡರ ಟಿಪ್ಪಣಿ ಬರೆಯಿರಿ : (2×4=8)

1) ಕುಮಾರವ್ಯಾಸ
2) ಡಿ. ವಿ. ಗುಂಡಪ್ಪ
3) ಸು. ರಂ. ಎಕ್ಕುಂಡಿ
4) ಅಮೃತ ಸೋಮೇಶ್ವರ.

ಆ) ಕೆಳಗಿನವುಗಳಲ್ಲಿ ಎರಡರ ಟಿಪ್ಪಣಿ ಬರೆಯಿರಿ : (2×4=8)

1) ಜನಪದ ಪುರಾಣ ಕಥೆ
2) ಹುಸೇನುಸಾಬಿ
3) ಜೀವಾಮೃತ
4) ಅರ್ಧವಿರಾಮ.

VI. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ : (12×1=12)

1) ಶಿವನ ವಾಹನ ಯಾವುದು ?
2) ಭೀಮ ಯಾವ ಹೂವನ್ನು ಅರಸುತ್ತ ಹೋದನು ?
3) ನಡುಗನ್ನಡ ಸಾಹಿತ್ಯದ ಶ್ರೇಷ್ಠ ಆಶುಕವಿ ಯಾರು ?
4) 'ಬಕುಲದ ಹೂವುಗಳು' ಯಾರ ಕವನ ಸಂಕಲನವಾಗಿದೆ ?
5) ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯನ್ನು ಹುಟ್ಟು ಹಾಕಿದವರು ಯಾರು ?
6) ವಾಕ್ಯ ಪೂರ್ಣವಾದಾಗ ಕೊನೆಯಲ್ಲಿ ಯಾವ ಲೇಖನ ಚಿಹ್ನೆಯನ್ನು ಬಳಸಲಾಗುತ್ತದೆ ?
7) ಡೆಬಿಟ್ ಕಾರ್ಡ್ ಎಂದರೇನು ?
8) ಬಾಲದ ಕದವ ತೆಗೆ – ಕಾವ್ಯಭಾಗವನ್ನು ಯಾವ ಕೃತಿಯಿಂದ ಆರಿಸಲಾಗಿದೆ ?
9) ಕೂರಲಗು ಎಂದರೇನು ?
10) ಸು. ರಂ. ಎಕ್ಕುಂಡಿಯವರ ಪೂರ್ಣ ಹೆಸರೇನು ?
11) ಅಂಗಡಿ ಅಜ್ಜಪ್ಪನ ಹನ್ನೆರಡು ವರ್ಷದ ಮಗಳ ಹೆಸರೇನು ?
12) ನಿಮಗಿರುವ ತುಳು ಕವಿತೆಯ ಹೆಸರೇನು ?